# ❋ ಮೀನಿನ ಬುಟ್ಟಿ ❋

ಪಿ. ಪುರುಷೋತ್ತಮ ಕಾರಂತ

ಶ್ರೀರಾಮಕೃಷ್ಣರ ಒಂದು ದೃಷ್ಟಾಂತ ಕಥೆಯ ಮರ್ಮವನ್ನು ವಿವರಿಸಿ, ಮಾನವನ ಸ್ವಭಾವವನ್ನು ಕುರಿತು ಆಲೋಚಿಸಿರುವ ಮಂಗಳೂರಿನ ನಿವಾಸಿಗಳಾದ ಲೇಖಕರು ಖ್ಯಾತ ಚಿತ್ರಕಾರರು ಹಾಗು ಶ್ರೀರಾಮಕೃಷ್ಣ ಆಶ್ರಮದ ನಿಕಟ ಭಕ್ತರು.

ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದರೂ ನಮ್ಮ ಜೀವನ ಸುಗಮವಾಗಿ ಸಾಗುತ್ತಿದೆ ಎಂದೇ ನಾವೆಲ್ಲರೂ ಭಾವಿಸಿಕೊಳ್ಳುತ್ತೇವೆ. ಇದು ನಮ್ಮ ಸುಖದ ಪರಿಕಲ್ಪನೆಯನ್ನು ಅವಲಂಬಿಸಿದೆ. ಹಿತವಾದ ವ್ಯಾಪಾರ, ವ್ಯವಹಾರ, ಸಾಮಾನ್ಯ ಆರೋಗ್ಯ, ಸಂಪತ್ತು ಸಲಕರಣೆಗಳು ತಕ್ಕಷ್ಟಿದ್ದರೆ, ಅಷ್ಟರಲ್ಲೇ ಕೆಲವರಿಗೆ ಜೀವನ ಸುಗಮವಾಗಿ ಸಾಗುತ್ತಿದೆ ಎಂದು ಅನಿಸುತ್ತದೆ. ಆದರೆ ಇಷ್ಟೇ ಅಲ್ಲದೆ ಜೀವನದಲ್ಲಿ ಇದಾವುದಕ್ಕೂ ನಿಲುಕದ ಆಂತರಿಕ ನೆಮ್ಮದಿ, ಸುಖ ಅಥವಾ ಆಧ್ಯಾತ್ಮಿಕತೆ ಬೇಕು, ಧರ್ಮ, ರೀತಿ, ನೀತಿ ಇರಬೇಕು ಎಂದು ಕೆಲವರು ಭಾವಿಸುತ್ತಾರೆ. ಸಮಾಜಸೇವೆ, ಆಚಾರವಿಚಾರಗಳೆಲ್ಲವೂ ಬೇಕು ಎಂದು ಮತ್ತೆ ಕೆಲವರಿಗೆ ಅನಿಸುವುದಿಲ್ಲವೇ! ಪುನಃ ಇವುಗಳ ಬಗ್ಗೆ ಪ್ರತಿಯೊಬ್ಬರಿಗೂ ತಮ್ಮದೇ ಆದ ಒಂದು ಪರಿಕಲ್ಪನೆ ಇದ್ದೇ ಇರುತ್ತದೆ. ಈ ಕಲ್ಪನೆಗಳಿಗೆ ಅನುಸಾರವಾಗಿಯೇ ಇವಕ್ಕೆಲ್ಲ ನಾವೇ ಒಂದು ಮಿತಿಯನ್ನು ಹಾಕಿಕೊಂಡಿರುತ್ತೇವೆ. ಆದ್ದರಿಂದಲೇ ಆ ಮಿತಿಯೊಳಗೇ ನಮ್ಮ ಜೀವನವನ್ನು ನಡೆಸಲು ಬಯಸುತ್ತ, ಅದರೊಳಗೇ ಎಲ್ಲ ವೇದಾಂತ, ಸಿದ್ಧಾಂತ, ಧರ್ಮ, ಜೀವನದ ಧ್ಯೇಯ, ಧೋರಣೆಗಳನ್ನು ಅಳವಡಿಸಿಕೊಂಡು ಅನುಭವಿಸುವುದಕ್ಕೆ ಇಚ್ಛಿಸುತ್ತೇವೆ. ಅಷ್ಟೇ ಅಲ್ಲ, ನಾವು ಹಾಕಿಕೊಂಡ ಈ ಚೌಕಟ್ಟಿನೊಳಗೇ ನಮ್ಮ ಜೀವನದ ವಿವಿಧ ಸಾಧನೆ, ಹೋರಾಟ, ಗುರಿ, ಪ್ರಯತ್ನಗಳೆಲ್ಲ ನಡೆಯುತ್ತಿರುತ್ತವೆ. ಹೊರಗಿನ ಪ್ರಪಂಚದಲ್ಲಿ ನಮ್ಮೆದುರು, ಅಥವಾ ಸುತ್ತಮುತ್ತಲು ಎಷ್ಟೆಷ್ಟೋ ನಿಜವಾದ ಉತ್ತಮ ಆದರ್ಶಗಳು, ಧರ್ಮ, ರೀತಿ, ನಿಯಮಗಳು ಹಾಗೂ ಸನ್ಮಾರ್ಗಗಳು ನಮಗೆ ದೊರೆಯುವುದು ಸಾಧ್ಯವಿದ್ದರೂ ಅವು ಯಾವುದರಿಂದಲೂ ನಮಗೆ ಸುಖ ಶಾಂತಿ ದೊರೆಯುವಂತೆ ಕಾಣುವುದಿಲ್ಲ! ಅಂದರೆ ನಮ್ಮ ಮನಸ್ಸು ಅವುಗಳನ್ನು ಅವುಗಳ ನಿಜರೂಪದಲ್ಲಿ ಜೀವನದಲ್ಲಿ ಅಳವಡಿಸಿಕೊಳ್ಳಲೂ ಒಪ್ಪುವುದಿಲ್ಲ. ಆಗಲೇ ನಮ್ಮ ಪರಿಕಲ್ಪನೆಯ ಸುಖಶಾಂತಿಗಾಗಿ, ಸಾಧನೆಗಾಗಿ, ಜೀವನವನ್ನು ರೂಪಿಸುವುದಕ್ಕಾಗಿ, ಜೀವನವಿಡೀ ಹೊತ್ತು ಅಲೆಯುತ್ತಿರುವ ನಮ್ಮ 'ಮೀನಿನ ಬುಟ್ಟಿ'ಗೆ ಶರಣು ಹೋಗುತ್ತೇವೆ— ಶರಣು ಹೋಗುವುದೇನು? ಅದೇ ನಮ್ಮ ಜೀವನದ ರೂವಾರಿಯಾಗುತ್ತದೆ.

ಇದೇನಿದು ನಮ್ಮ 'ಮೀನಿನ ಬುಟ್ಟಿ'! ನಿಜವಾಗಿ ನಮಗೆ ಯಾರಿಗೂ ಇದು ಅಪರಿಚಿತವಲ್ಲ! ನಾವೇ ನಮ್ಮ ಜನನದೊಂದಿಗೆ ಹೊತ್ತು ತಂದ, ಮುಂದೆ ಬೆಳೆಸಿಕೊಂಡು ಬಂದ, ಜೀವನವಿಡೀ ಹೊತ್ತು ಅಲೆಯುವ, ಬಗೆಬಗೆಯ ಬಣ್ಣ ವಾಸನೆಗಳ—'ಈ ಬುಟ್ಟಿ'. ಸುಖವೆಂದೆಣಿಸಿದ ನಮ್ಮದೇ ಆದ ಪ್ರಾಪಂಚಿಕತೆಗಳ, ಸೆಳೆತಗಳ, ಸಂಸ್ಕಾರಗಳ 'ಮೀನಿನ ಬುಟ್ಟಿ'ಯನ್ನು ನಾವು ನಮ್ಮ ಮೂಗಿನ ಹತ್ತಿರ ಇರಿಸಿಕೊಂಡಿದ್ದೇವೆ ಎಂಬುದು ನಮಗೆ ತಿಳಿದಿಲ್ಲವೆಂಬುದು ಮಾತ್ರ ಒಂದು ವಿಷಾದಕರವಾದ ವಿಷಯವಾಗಿದೆ.

ನಮ್ಮ ಜೀವನದಲ್ಲಿ ಪ್ರಾಪಂಚಿಕತೆಯ ಆಕರ್ಷಣೆಗಳಿಂದಾಗಿ ನಿಜವಾದ, ಸರಳವಾದ, ನೇರವಾದ ಧಾರ್ಮಿಕತೆಯನ್ನು ನಾವು ಸಹಿಸಲಾರದೆ, ಅಳವಡಿಸಿಕೊಳ್ಳಲಾರದೆ ನಮ್ಮದೇ ಆದ ವಾಸನೆಗಳ ಆಧಾರದಲ್ಲೇ ಅವುಗಳನ್ನು ಬೇಕುಬೇಕಾದಂತೆ ರೂಪಾಂತರಿಸಿಕೊಂಡದ್ದನ್ನು ನಾವು ಗಮನಿಸಬಹುದು. ಆದರೆ ಇದನ್ನು ಕಂಡುಕೊಳ್ಳಲು ನಮ್ಮ ದೃಷ್ಟಿ ಮಾತ್ರ ಪ್ರಾಮಾಣಿಕವೂ ಪೂರ್ವಗ್ರಹ ಪೀಡಿತವಲ್ಲದ್ದೂ ಆಗಿರಬೇಕು! ಹೀಗೆ ನಾವು ಎಲ್ಲವನ್ನೂ ವಿಕೃತಗೊಳಿಸಿ ನಮಗೆ ಅನುಕೂಲ ಮಾಡಿಕೊಳ್ಳುವುದೇ ನಮ್ಮ ಜೀವನದ ರೀತಿಯಾಗಿದೆ. ನಮ್ಮೆಲ್ಲರ ಜೀವನದಲ್ಲಿ ನಮಗರಿವಿರದಂತೆ ಅನಿವಾರ್ಯವಾಗಿರುವ ಈ ಮೀನಿನ ಬುಟ್ಟಿಯ ಕುರಿತು ಭಕ್ತರಿಗೆ ವಿವರಿಸುತ್ತ ಶ್ರೀರಾಮಕೃಷ್ಣರು ಒಂದು ಕತೆ ಹೇಳುತ್ತಿದ್ದರು. ಮನಸ್ಸಿನ ಒಂದೇ ಒಂದು ವಿಚಾರವನ್ನಾದರೂ ಸೂಕ್ಷ್ಮವಾಗಿ ಗಮನಿಸಿದ ಸಾಧಕನಿಗೆ ಈ ಕತೆಯ ಮರ್ಮ ತಿಳಿಯುವುದರಲ್ಲಿ ಸಂಶಯವಿಲ್ಲ. ಅವರೆನ್ನುತ್ತಿದ್ದರು:

'ಒಮ್ಮೆ ಮೀನು ಮಾರುವ ಕೆಲವು ಹೆಂಗಸರು ವ್ಯಾಪಾರ ಮುಗಿಸಿಕೊಂಡು ಸಂಜೆ ತಮ್ಮ ಮನೆ ಕಡೆಗೆ ಹಿಂತಿರುಗುವಾಗ ಬಹಳ ತಡವಾಯಿತಂತೆ. ಸಂಜೆಗತ್ತಲು ಕವಿಯತೊಡಗಿತು, ಮಳೆಯೂ ಆರಂಭವಾಯಿತು. ಹಳ್ಳಿ ಬಹಳ ದೂರದಲ್ಲಿ ಇದ್ದದ್ದರಿಂದ ಆ ರಾತ್ರಿಯನ್ನು ಅಲ್ಲೇ ಎಲ್ಲಿಯಾದರೂ ಕಳೆಯುವುದು ಅನಿವಾರ್ಯವಾಯಿತು. ಆಗ ಮೀನುಗಾರರ ಹೆಂಗಸರಿಗೆ ಒಂದು ಯೋಗ್ಯ ಮನೆಯೂ ಸಿಕ್ಕಿತು. ಆ ಮನೆಯಾಕೆ ಹೂವು ಮಾರುವವಳು. ಈ ಹೆಂಗಸರ ಕಷ್ಟಕ್ಕೆ ಕನಿಕರಪಟ್ಟು, ಮರುದಿನ ಮಾರಲಿರುವ ಅರಳುವ ಹೂಗಳನ್ನಿರಿಸಿದ ಜಗಲಿಯಲ್ಲಿ ರಾತ್ರಿ ಕಳೆಯುವಂತೆ ಅವರಿಗೆಲ್ಲ



ಕಲೆ:
ಪಿ. ಪುರುಷೋತ್ತಮ
ಕಾರಂತ್

ಹೇಳಿವಳು. ಮೀನುಗಾರರ ಹೆಂಗಸರಿಗೆ ಮೊದಲಿಗೆ ಸಂತಸ ವಾಯಿತು. ಅಲ್ಲಿ ಅರಳಿದ ವಿವಿಧ ಹೂವುಗಳ ಆಹ್ಲಾದ ಕರವಾದ ಪರಿಮಳ ತುಂಬಿತ್ತು. ಆದರೆ ಮೀನುಗಾರರ ಹೆಂಗ ಸರಿಗೆ ಮಾತ್ರ ಅಲ್ಲಿ ನಿದ್ದೆ ಬರದೆ ರಾತ್ರಿಯೆಲ್ಲ ಚಡಪಡಿಸು ತ್ತಿದ್ದರಂತೆ. ಹಾಗೆ ಹೂಗಳ ಸುವಾಸನೆಯಿಂದಾಗಿ ನಿದ್ರೆಗೆಟ್ಟ ಅವರಲ್ಲಿ ಒಬ್ಬಾಕೆಗೆ ಒಂದು ಉಪಾಯ ಹೊಳೆಯಿತು. ಅವಳು ತನ್ನ ಗೆಳತಿಯರಿಗೆಲ್ಲ 'ನಾವು ನಮ್ಮ ಮೀನಿನ ಬುಟ್ಟಿಗೆ ನೀರನ್ನು ಚಿಮುಕಿಸಿಕೊಂಡು ನಮ್ಮ ಮುಖದ ಮುಂದೆ ಇರಿಸಿಕೊಂಡು ಮಲಗುವ. ಈ ಹೂವುಗಳ ಸ್ವಚ್ಛ ಪರಿಮಳ ದಿಂದಾಗಿ ನಮಗೆ ನಿದ್ರೆಯೇ ಬರುವಂತಿಲ್ಲ' ಎಂದಳಂತೆ. ಎಲ್ಲರೂ ಒಪ್ಪಿಕೊಂಡು ಹಾಗೆಯೇ ಮಾಡಿದರು. ಕುಡಲೇ ಅವರೆಲ್ಲರೂ ಗಾಢ ನಿದ್ರೆ ಹೋದರಂತೆ."

ಪ್ರಾಪಂಚಿಕತೆಯ ಆಸಕ್ತಿಯುಳ್ಳವರಲ್ಲಿ ಇಂತಹ ಮೀನಿನ ವಾಸನೆಯಿಂದ ಮೈಮರೆಯುವಷ್ಟು ಗಾಢ ನಿದ್ರೆಯಿಲ್ಲವೇ! ಜೀವನ ಸುಗಮವಾಗಿ ಸಾಗುತ್ತಿದೆ ಎಂಬ ಮಬ್ಬು ಕವಿದಿದೆ ಮಾತ್ರ. ನಮ್ಮ ಪ್ರಸ್ತುತ ಸ್ಥಿತಿಗತಿಯ ಈ ನೂರಾರು ಗೊಂದಲಗಳೊಳಗೆ ಇರುವುದೇ ಒಂದು ತೆರನಾದ ಶಾಂತಿ ಯೆಂದು, ಅದರೊಳಗೇ ಮೈಮರೆತು, ಒಪ್ಪಿಕೊಂಡಿದ್ದೇವೆ ಅಷ್ಟೆ! ಮಾದಕತೆಯ ವಾಸನೆಯ ಈ 'ಮೀನಿನಬುಟ್ಟಿ' ತರುವ 'ಶಾಂತಿ' ಕೆಡಬಹುದಲ್ಲ ಎಂಬ ಭಯವೂ ಉಂಟಾ ಗುತ್ತದೆ. ಆದ್ದರಿಂದ ಉತ್ತಮ ಆಧ್ಯಾತ್ಮಿಕ ಚಿಂತನೆಯನ್ನೇ ಬಿಟ್ಟುಬಿಡುತ್ತೇವೆ. ನಮ್ಮನ್ನೇ ವಂಚಿಸಿಕೊಳ್ಳುವ ನಮ್ಮದೇ ಮನಸ್ಸಿನ ಆಟ ಇದು. ಆದರೂ ಅದರ ನಿಜವನ್ನು ನಾವು ಮೋಹ ದಿಂದಾಗಿ ಒಪ್ಪಿಕೊಳ್ಳಲಾರೆವು! ಅಷ್ಟೇ ಅಲ್ಲ, ಬೇಕಾದಷ್ಟು ಕಾರಣಗಳನ್ನು ಹುಡುಕಿ, ನಮ್ಮ ನಿಲುವನ್ನು ಸಮರ್ಥಿಸಿಕೊಳ್ಳುತ್ತೇವೆ.

ನಮ್ಮ ಪ್ರಾಪಂಚಿಕ ಜೀವನದ ಅತ್ಯಲ್ಪ ಹೇಯ ಸುಖಭೋಗಗಳ ಆಕರ್ಷಣೆಯಿಂದಾಗಿ ಈ ಮೌಢ್ಯ ಸ್ಥಿತಿಯನ್ನು ಕಳೆದುಕೊಳ್ಳುವುದಕ್ಕೆ ಭಯಪಡುತ್ತೇವೆ. ಆದರೂ ನಾವು ನಮ್ಮ ಅಂತರಂಗದಲ್ಲಿ ನಿಜವಾಗಿ ಪ್ರಾಮಾಣಿಕರಾಗಿದ್ದರೆ ಇಂತಹ ಭಯಕ್ಕೆ ಕಾರಣವಿಲ್ಲ! ಇಂತಹ ಭಯವಿದ್ದರೆ, ಅಂತರಂಗದಲ್ಲಾಗಲಿ, ಬಹಿರಂಗ ದಲ್ಲಾಗಲಿ ಭಗವಂತನ ಅಸ್ತಿತ್ವದ ಕುರುಹಾದ ಸರಳ ಸಹಜ ಅನುಭವ ಗಳಿಗೂ ಯಾವಾಗಲೂ ವಿಮುಖರಾಗಲು ಅಥವಾ ಉದಾಸೀನರಾಗಲು ಬಯಸುವುದನ್ನು ನಾವು ಗಮನಿಸ ಬಹುದು. ತಾನಾಗಿ ಒದಗುವ ಇಂತಹ ಸುಸಂದರ್ಭಗಳನ್ನು ನಾವು ತಪ್ಪಿಸಿಕೊಳ್ಳುತ್ತೇವೆ. ಭಗವಂತನಲ್ಲಿ ಪ್ರೇಮಭಕ್ತಿಯನ್ನು ನಾವು ನೇರವಾಗಿ ಕಾಣಲಾರೆವು.

ನಾವು ನಮ್ಮ ಜನ್ಮಜನ್ಮಾಂತರಗಳಿಂದ ಹೊತ್ತುತಂದಿರುವ ಸ್ವಾರ್ಥ, ಲೋಭ, ಮೋಹ, ಮತ್ಸರಾದಿ ಅನೇಕ ವಿಕಾರ ಗಳಿಂದ ಪ್ರೇರಿತರಾಗಿ, ರೂಪಾಂತರಿತವಾದ ಚಟುವಟಿಕೆಗಳಲ್ಲೇ ಜೀವಿಸಲು ಯತ್ನಿಸುತ್ತೇವೆ. ನಮ್ಮ ಹೆಸರು-ಕೀರ್ತಿಗಳಿಗಾಗಿಯೇ ಸತ್ಕಾರ್ಯಗಳು; ಅಹಂಕಾರದ ಮೆರೆಯುವಿಕೆಗಾಗಿಯೇ ಸಾಮಾಜಿಕ ಧಾರ್ಮಿಕ ಉದ್ಧಾರದ ಚಟುವಟಿಕೆಗಳು; ಮತ್ತೆ ಪವಾಡ ಶಕ್ತಿ, ಅಕರ್ಷಣೆ, ಪ್ರತಿಷ್ಠೆಗಳಿಗಾಗಿಯೇ ಯೋಗ ಸಾಧನೆಗಳು, ಮಂತ್ರ ಪ್ರವಚನಗಳು—ಈ ಸತ್ಕಾರ್ಯಗಳೆಲ್ಲ ಶುದ್ಧ ಸುವಾಸನೆಯನ್ನು ಸಹಿಸದ ನಮ್ಮ 'ಮೀನಿನ ಬುಟ್ಟಿ'ಯ ಆಕರ್ಷಣೆಗಳಲ್ಲವೇ? ರೂಪಾಂತರಗಳಲ್ಲವೇ?

ನಮ್ಮ ಜೀವನದಲ್ಲಿ ಶುದ್ಧ ಪ್ರೇಮ ಅಥವಾ ಅನುಕಂಪೆಗೆ ದೊರೆಯಬೇಕಾದ ಸ್ಥಾನ ಕಲ್ಪನೆಗೂ ಮೀರಿದಂತಿದೆ. ಯಾಕೆಂದರೆ ನಮ್ಮ ಪ್ರೇಮಕ್ಕೆ ಒಂದು ಬಗೆಯ ಲಾಭದ ಆಕರ್ಷಣೆ, ಒಡೆತನದ ಸಂಚು, ಭಯ, ಮಾತ್ಸರ್ಯಗಳ ಮುಸುಕು ಇದ್ದೇ ಇರುತ್ತದೆ. ಆದರೆ ಶ್ರೀರಾಮಕೃಷ್ಣರು ಹೇಳುತ್ತಿದ್ದರು: "ಸರಿ, ಸ್ವಲ್ಪ ಅಹಂ ಇರುವುದು ಒಳ್ಳೆಯದೆ.

ಇಲ್ಲವಾದರೆ ಈ ಪ್ರಪಂಚದಲ್ಲಿ ಜನಹಿತ ಕಾರ್ಯಗಳೇನೂ ಆಗಲಾರವು. ಹೆಸರು, ಕೀರ್ತಿಗೋಸ್ಕರವಾದರೂ ಹಲವು ಸತ್ಕಾರ್ಯಗಳು ಲೋಕದಲ್ಲಿ ನಡೆಯುತ್ತವೆ." ಈ ಉದ್ಗಾರದ ದುರ್ಲಭವನ್ನು ಪಡೆಯದಂತೆ ಮತ್ತೊಂದೆಡೆ ಮಾರ್ಮಿಕವಾಗಿ ಎಚ್ಚರಿಸಿದ್ದಾರೆ, ನಮ್ಮನ್ನು ಈ ಕುರಿತು ಸ್ವಲ್ಪ ಆಲೋಚಿಸುವಂತೆ ಮಾಡಿದ್ದಾರೆ. "ಏನು, ಭಗವಂತ ಕಾಣ ಸಿಕ್ಕಿದರೆ ನೂರಾರು ಕೆರೆ ಬಾವಿ ತೋಡಿಸಲು, ಶಾಲೆ ಛತ್ರ ಕಟ್ಟಿಸಲು ಶಕ್ತಿ ಕೊಡು ಎಂದು ಕೇಳುವಿರಾ?" ಈ ವಿಕಾರವಾದ 'ಅಹಂ' – 'ಬುಟ್ಟಿಯ ವಾಸನೆ' ನಮ್ಮ ಸುಖ ಶಾಂತಿಗೆ ಅಗತ್ಯವೇ ಇಲ್ಲ. ಜಿಪುಣತೆ, ಸ್ವಾರ್ಥಗಳನ್ನು ಬಿಟ್ಟು ದ್ವೇಷ ಅಸೂಯೆಗಳಿಲ್ಲದ ಜನಸೇವಾಕಾರ್ಯಗಳ ಮುಖೇನ ಸತ್ಕಾರ್ಯ ಮಾಡುವ ಪ್ರೇರಣೆ ಮಾತ್ರ ಶ್ಲಾಘ್ಯವೇ ಸರಿ! ಒಂದು ಹಂತದಲ್ಲಿ ಈ ಪ್ರಾಪಂಚಿಕ ವಾಸನೆಗಳು ಉಪಯುಕ್ತವಾಗಿ ಕಂಡುಬಂದರೂ 'ಸೇವೆಗಾಗಿ ಸೇವೆ' 'ಪ್ರೇಮಕ್ಕಾಗಿ ಪ್ರೇಮ' ಎಂಬಂತಹ ಎರಡನೆ ಭಾವನೆಯ ಸ್ಥಿತಿಯನ್ನೇ ಸ್ಪಷ್ಟವಾಗಿ ಇಲ್ಲಿ ಅವರು ಪುಷ್ಟೀಕರಿಸಿದಂತಿದೆ.

ನಾವು ಹೊರಗಿನಿಂದ ಹಲವು ರೀತಿಯ ಸತ್ಕಾರ್ಯಗಳನ್ನು ಆರೋಪಿಸಿಕೊಂಡರೂ ಅವುಗಳನ್ನೆಲ್ಲ ಕಾರ್ಯಗತಗೊಳಿಸುವ ನಮ್ಮ ಮನಸ್ಸೇ ಪ್ರಾಮಾಣಿಕವಾಗಿರಬೇಕಲ್ಲ! ಪ್ರಾಮಾಣಿಕತನವೆಂದರೆ ಕದಿಯದೆ, ಪರರಿಗೆ ಮೋಸಮಾಡದೆ ಇರುವುದು ಮಾತ್ರವಲ್ಲ, ಅದಕ್ಕಿಂತಲೂ ಸೂಕ್ಷ್ಮ ಹಾಗೂ ಹೆಚ್ಚು ಪರಿಣಾಮಕಾರಿಯಾದ ಮತ್ತೊಂದಿದೆ—ನಮಗೆ ನಾವೇ ಅಪ್ರಾಮಾಣಿಕರಾಗದೇ ಇರುವುದು! ನಮ್ಮ ಹೃದಯದ ಮಿಡಿತವನ್ನು, ಅಂತರಂಗವನ್ನು ನಾವು ಇದ್ದಂತೇ ಆಲಿಸುವುದು ಮತ್ತು ಆ ಸ್ಥಿತಿಯಲ್ಲಿ ಜೀವನವನ್ನು ಒಪ್ಪುವುದು—ಇದು ಪೂರ್ಣ ಪ್ರಾಮಾಣಿಕತನ! ಇಲ್ಲಿ ನಮ್ಮ ಹೃದಯದ ನುಡಿಗೆ ಬಗೆಬಗೆಯಾಗಿ ವ್ಯಾಖ್ಯಾನಿಸದೆ, ವ್ಯಕ್ತಿತ್ವದೊಳಗೆ ಒಂದು ದರ್ಪಣವಿರಿಸಿಕೊಂಡಂತೆ. ಇದಕ್ಕೆ ಅಸಾಧಾರಣವಾದ ಮನೋಬಲ, ಸತ್ಯವನ್ನರಿಯುವ ದೃಢ ನಿರ್ಧಾರ ಅತ್ಯಗತ್ಯವಾಗಿ ಬೇಕಾಗುತ್ತದೆ. ಇಲ್ಲಿ ಯಾವುದೇ ರಾಜಿಗೆ (compromise) ಎಡೆಯಿಲ್ಲ. ನಾವು ಕಂಡುಕೊಂಡ ಸತ್ಯಕ್ಕೆ ವಂಚನೆಯಿಲ್ಲದೆ ಇರುವುದೇ ಪ್ರಾಮಾಣಿಕತನ. ಕೆಲವು ತತ್ತ್ವಜ್ಞಾನಿಗಳು ಹೇಳುವಂತೆ, ನಮ್ಮನ್ನು ನಾವು ಪ್ರೀತಿಸುವುದೇ ಇಲ್ಲ. ಇಲ್ಲವಾದರೆ, ಅಂತಹ ಆತ್ಮವಂಚನೆಗೆ ಆಸ್ಪದ ಕೊಡುವ ದುಷ್ಪರಿಣಾಮಗಳನ್ನು ಸ್ವಾಗತಿಸುತ್ತಿರಲಿಲ್ಲ! ಹೀಗೆ ನಮ್ಮ ಎಲ್ಲ ಕಾರ್ಯಕ್ರಮಗಳನ್ನೂ ಪರೀಕ್ಷಕ ದೃಷ್ಟಿಯಿಂದ ನೋಡಿದರೆ ನಮ್ಮ 'ಮೀನಿನ ಬುಟ್ಟಿಯ' ದರ್ಶನ ನಮಗಾಗುತ್ತದೆ. ಇದರ ಅರಿವಿನಿಂದಲೇ ನಮಗೆ ಇದರಿಂದ ಮುಕ್ತರಾಗಲು ಸಾಧ್ಯ!

ಸೆಳೆತಗಳ ಮೋಹ ಬಹುಮಟ್ಟಿಗೆ ಅನಿವಾರ್ಯವೆಂದೇ ತೋರುತ್ತದೆ. ನಮ್ಮೊಳಗಿನ ಈ ಸ್ಥಿತಿಯನ್ನು ನೋಡಲಾರದೆ ಸಹಿಸದೆ ನಾವೇ ನಾಚಿಕೊಂಡು ಪಲಾಯನ ಮಾಡಿದರೆ ಮತ್ತೆ ನಾವೇ ದೊಡ್ಡ ನಷ್ಟಕ್ಕೆ ಒಳಗಾಗುತ್ತೇವೆ. ಔಷಧೋಪಚಾರಗಳಿಗೆ ಒಲ್ಲದ ಕಡು ರೋಗಿಯ ಬವಣೆಯೇ ನಮ್ಮದಾಗುತ್ತದೆ!

ನಿಜವಾಗಿ ಅಧ್ಯಾತ್ಮ ಜೀವನವೆಂದರೆ ದರ್ಶನ ಹಾಗೂ ಅಷ್ಟಸಿದ್ಧಿಗಳ ವೈಭವವಲ್ಲ. ಶುದ್ಧ ಸರಳ ಮಾನವೀಯತೆಯ ಮೂಲಕ ಸತ್ಯವನ್ನು ಹೊಂದುವುದು—ಅರಳಿಸಿಕೊಳ್ಳುವುದು! ಆದ್ದರಿಂದ ನಮ್ಮ ಸಣ್ಣ ಸಣ್ಣ ಮೋಹಗಳು ನಮ್ಮ ಅರಿವಿಗೇ ಬಾರದಂತೆ, ನಮ್ಮನ್ನು ತರಗೆಲೆಯಂತೆ ಹಾರಿಸಿಕೊಂಡು ಹೋಗುವುದನ್ನು ಪ್ರಾಮಾಣಿಕವಾಗಿ ಕಂಡುಕೊಳ್ಳುವುದೆಂದರೆ, ಅದನ್ನು ಆಗಲೇ ತಿದ್ದಿಕೊಂಡಂತೇ ಸರಿ. ಆಗಲೇ ನಮ್ಮಲ್ಲಿ ಮಾನವೀಯತೆಯ ಶುದ್ಧ ಸತ್ಯ ಜೀವನ ಅರಳತೊಡಗುತ್ತದೆ. ಆದ್ದರಿಂದಲೇ ಇಂತಹ ಆತ್ಮವಿಶ್ಲೇಷಣೆ ಅಥವಾ ಆತ್ಮಜ್ಞಾನವಿಲ್ಲದೆ ಶತಮಾನಗಳಷ್ಟು ಕಾಲ ಮಂತ್ರ-ಧ್ಯಾನಗಳಲ್ಲಿ ತೊಡಗಿದರೂ ನಿಷ್ಪ್ರಯೋಜಕ ಎಂಬ ಶಂಕರರ ಮಾತು ನಿಜವೆನಿಸುತ್ತದೆ. ಹೇಗಿದ್ದರೂ ನಮ್ಮ ಅಧ್ಯಾತ್ಮ ಜೀವನದ ಮೊತ್ತ ಮೊದಲ ಹಾಗೂ ಅತ್ಯಗತ್ಯ ಕೆಲಸ ನಮ್ಮನ್ನು ನಾವು ತಿಳಿದುಕೊಳ್ಳುವುದೇ ಆಗಿದೆ. ಈ ಅರಿವಿನ ಎಚ್ಚರ ನಮ್ಮ ಜೀವನದಲ್ಲಿ ಸದಾ ಕಾಲವೂ ಇರಬೇಕಾದದ್ದು. ಆಗ ಮಾತ್ರ, ಎಲ್ಲವೂ ನಿಜವಾಗಿ ಸುಗಮ! ✪

**ಪ್ರಪಂಚ ಹೇಗಿದೆ ಬಲ್ಲಿರಾ? ಇದು ಬರೀ ಬೀಜ ಮತ್ತು ಸಿಪ್ಪೆಯಿಂದ ಕೂಡಿದ ಒಂದು ಬಗೆಯ ಹಣ್ಣಿನಂತೆ ಇದೆ. ತಿರುಳು ಇರುವುದು ಎಲ್ಲೋ ಸ್ವಲ್ಪ. ಅಂತಹ ಹಣ್ಣನ್ನು ತಿಂದರೆ ಹೊಟ್ಟೆ ನೋವು ಬರುವುದು. ಕೈಗೆ ಎಣ್ಣೆ ಸವರಿಕೊಂಡು ಹಲಸಿನ ಹಣ್ಣನ್ನು ಹಚ್ಚಿದರೆ ಕೈ ಅಂಟಾಗುವುದಿಲ್ಲ. ಅದರಂತೆಯೇ ನಾವು ಮೊದಲು ಭಕ್ತಿ ಎಂಬ ಎಣ್ಣೆಯನ್ನು ಸವರಿಕೊಂಡರೆ ಪ್ರಪಂಚದಲ್ಲಿ ಕಾಮ ಕಾಂಚನಗಳ ಪಾಶಕ್ಕೆ ಬೀಳದೆ ಇರಬಹುದು.**

**ನಿತ್ಯ ಮತ್ತು ಅನಿತ್ಯಗಳ ನಡುವೆ ನೀವು ಯಾವಾಗಲೂ ವಿವೇಚಿಸಬೇಕು. ಭಗವಂತನೊಬ್ಬನೇ ನಿತ್ಯ ಮತ್ತು ಸನಾತನ ಸತ್ಯ. ಮಿಕ್ಕೆಲ್ಲವೂ ಅನಿತ್ಯ ಅಂದರೆ ನಶ್ವರ.**

**ಕೇವಲ ಓದುವುದರಿಂದಲೇ ಆಗಲಿ ಅಥವಾ ಕೇಳುವುದರಿಂದಲೇ ಆಗಲಿ ಏನು ಪ್ರಯೋಜನ? .... ಭಗವಂತನನ್ನು ನಿಜವಾಗಿ ದರ್ಶನ ಮಾಡಬಹುದು. ಅಷ್ಟೇ ಏಕೆ, ಆತನೊಡನೆ ಮಾತುಕತೆಯನ್ನೂ ಆಡಬಹುದು.**

**ಅತ್ಯಂತ ದುರ್ಲಭವಾಗಿರುವ ಮನುಷ್ಯಜನ್ಮವನ್ನು ಪಡೆದು, ಈ ಜನ್ಮದಲ್ಲೇ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಲು ಪ್ರಯತ್ನಿಸದಿದ್ದರೆ, ಅಂತಹವನ ಜನ್ಮ ವ್ಯರ್ಥ.**

—ಶ್ರೀರಾಮಕೃಷ್ಣ